**ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂಃ ನ್ಯಾಯಾಲಯಃ ನರಸಿಂಹರಾಜಪುರ**

**ಸಿಸಿಃನಂಃ 43/2025**

**ಸಿ.ಡಬ್ಲ್ಯೂಃ 6**
**ಪಿ.ಡಬ್ಲೂಃ** 6

**ಸಾಕ್ಷಿದಾರರ ಹೆಸರು ಃ ಸುಮುಖ್**
**ತಂದೆಯ ಹೆಸರು ಃ ಸತೀಶ್**
**ವಯಸ್ಸು ಃ 33 ವರ್ಷ**
**ಉದ್ಯೋಗ ಃ ಕೃಷಿ**
**ವಾಸಸ್ಥಳ ಃ ಶಿಡ್ಲೆ, ಶೃಂಗೇರಿ ತಾಲ್ಲೂಕು.**

**ದಿನಾಂಕಃ 17.03.2026 ರಂದು ಪ್ರಮಾಣವಚನ ಬೋಧಿಸಲಾಯಿತು.**

**ಃಃ ಮುಖ್ಯ ವಿಚಾರಣೆಃ ಮಾನ್ಯಃ ಎಪಿಪಿಯವರಿಂದಃ**

ನಾನು ಹಾಸನದಿಂದ ದಿನಾಂಕಃ 05.12.2024 ರಂದು ಶೃಂಗೇರಿ ಕಾರಿನಲ್ಲಿ ಹೋಗುತ್ತಿರುವಾಗ ಮಾರ್ಗ ಮಧ್ಯದಲ್ಲಿ ನಾನು ಮತ್ತು ಚಾಸಾ-7 ರವರು ಬಾಳೆಹೊನ್ನೂರಿನಲ್ಲಿ ಊಟ ಮಾಡಲು ಕಾರನ್ನು ನಿಲ್ಲಿಸಿದೆವು. ಆಗ ರಾತ್ರಿ ಸುಮಾರು 9.30 ಗಂಟೆ ಆಗಿತ್ತು. ಆ ಸಂದರ್ಭದಲ್ಲಿ ನಾವು 1 ನೇ ಆರೋಪಿತರು ಮತ್ತು ಚಾಸಾ-1, 4 ಮತ್ತು 5 ರವರುಗಳು ಸೌಂದರ್ಯ ಹೋಟೆಲ್ ಬಳಿ ಕೈಯಲ್ಲಿ ಬಿಯರ್ ಬಾಟಲಿ ಹಿಡಿದುಕೊಂಡು ಜಗಳವಾಡುತ್ತಿರುವುದು ಕಂಡು ಬಂದಿತು. ನಾವು ಅಲ್ಲಿಗೆ ಹೋಗುವಾಗ 1 ನೇ ಆರೋಪಿತರು ತನ್ನ ಕಾಲಿನಿಂದ ಚಾಸಾ-1 ರವರ ಎದೆಗೆ ಒದ್ದರು. ಮುಂದುವರೆದು ಆರೋಪಿತರು ತನ್ನ ಕೈಯಲ್ಲಿದ್ದ ಬಿಯರ್ ಬಾಟಲಿನಿಂದ ಚಾಸಾ-4 ರವರ ಎಡಭುಜಕ್ಕೆ ಹಲ್ಲೆ ಮಾಡಿದರು. ಮುಂದುವರೆದು ಬಿಯರ್ ಬಾಟಲಿನಿಂದ ಚಾಸಾ-5 ರವರಿಗೆ ಹಲ್ಲೆ ಮಾಡಲು ಪ್ರಯತ್ನಿಸಿದರು ಆ ಸಂದರ್ಭಕ್ಕೆ ನಾವು ಅಲ್ಲಿಗೆ ಹೋಗಿ ಸದರಿ ಗಲಾಟೆಯನ್ನು ಬಿಡಿಸಿದೆವು. ತದನಂತರ ನಾವು ಚಾಸಾ-1, 4 ಮತ್ತು 5 ರವರನ್ನು ಚಿಕಿತ್ಸೆಗಾಗಿ ಬಾಳೆಹೊನ್ನೂರಿನ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದೆವು. ತದನಂತರ ಅದೇ ದಿನ ಸುಮಾರು 10 ಗಂಟೆ ಸಮಯಕ್ಕೆ ಪೊಲೀಸರು ಆಸ್ಪತ್ರೆಗೆ ಆಗಮಿಸಿ ಗಾಯಾಳುಗಳ ಹೇಳಿಕೆ ದಾಖಲಿಸಿಕೊಂಡರು. ತದನಂತರ ದಿನಾಂಕಃ 6.12.2024 ರಂದು ಪೊಲೀಸರು ನನಗೆ ಮತ್ತು ಚಾಸಾ-7 ರವರಿಗೆ ಠಾಣೆಗೆ

ಬರುವಂತೆ ಸೂಚಿಸಿದ್ದರಿಂದ ನಾವು ಸುಮಾರು ಬೆಳಗ್ಗೆ 11 ಗಂಟೆಗೆ ಠಾಣೆಗೆ ಹೋದೆವು. ಸದರಿ ಸಮಯದಲ್ಲಿ ಪೊಲೀಸರು ನನ್ನ ಮತ್ತು ಚಾಸಾ-7 ರವರ ಹೇಳಿಕೆಗಳನ್ನು ದಾಖಲು ಮಾಡಿಕೊಂಡರು. ಆರೋಪಿತರು ಆರ್ ಟಿ ಐ ಕಾರ್ಯಕರ್ತನಾಗಿ ಹಲವರಿಗೆ ತೊಂದರೆ ಕೊಡುತ್ತಿದ್ದ ವಿಚಾರದಲ್ಲಿ ಸದರಿ ಗಲಾಟೆ ಸಂಭವಿಸಿರುತ್ತದೆ. (ಈ ದಿನ ನ್ಯಾಯಾಲಯದಲ್ಲಿ ಆರೋಪಿತರು ಗೈರು ಹಾಜರಿದ್ದು ಅವರ ಗುರುತಿಸುವಿಕೆಯನ್ನು ಆರೋಪಿತರ ಪರ ವಕೀಲರು ಆಕ್ಷೇಪಿಸುವುದಿಲ್ಲ ಎಂದು ನುಡಿಯುತ್ತಾರೆ. )

(ಈ ಹಂತದಲ್ಲಿ ಮಾನ್ಯ ಎಪಿಪಿ ಯವರು ಈ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರುತ್ತಾರೆ ಅಂತೆಯೇ ಪರಿಗಣಿಸಿ ಅನುಮತಿ ನೀಡಲಾಯಿತು)

**ಃಃಪಾಟೀ ಸವಾಲುಃ ಮಾನ್ಯ ಎಪಿಪಿಯವರಿಂದಃಃ**

ದಿನಾಂಕಃ 05.12.2024 ರಂದು ಸೌಂದರ್ಯ ಹೋಟೆಲ್ ಬಳಿ ಆರೋಪಿತರು ಚಾಸಾ-1 ಮತ್ತು 4 ರವರಿಗೆ ಕೊಲೆ ಬೆದರಿಕೆ ಹಾಕುತ್ತಿದ್ದರು ಎಂದರೆ ಸರಿ. ದಿನಾಂಕಃ 07.12.2024 ರಂದು ಬಾಳೆಹೊನ್ನೂರು ಪೊಲೀಸ್ ಠಾಣೆಯಲ್ಲಿ ನಾನು ನನ್ನ ಹೇಳಿಕೆ ನೀಡಿರುತ್ತೇನೆಂದರೆ ಸರಿ. ಸಾಕ್ಷಿಗೆ ಈಗಾಗಲೇ ನ್ಯಾಯಾಲಯದಲ್ಲಿ ನಿಶಾನಗೊಂಡಿರುವ ಎಂಒ-1 ನ್ನು ತೋರಿಸಿ ಕೇಳಲಾಗಿ ಅದನ್ನು ಆರೋಪಿತರು ಹಲ್ಲೆಗೆ ಬಳಸಿರುತ್ತಾರೆ ಎಂದು ನೋಡಿ ಗುರುತಿಸಿರುತ್ತಾರೆ.

**ಃಪಾಟೀ ಸವಾಲು ಆರೋಪಿ ಪರ ಶ್ರೀ. ಕೆ ಎಸ್ ಎಸ್ ವಕೀಲರಿಂದಃಃ**

ನಮ್ಮ ಗ್ರಾಮದಿಂದ ಬಾಳೆಹೊನ್ನೂರು ಸುಮಾರು 35 ಕಿ ಮೀ ದೂರದಲ್ಲಿದೆ. ನಾವು ಸದರಿ ದಿನದಂದು ಬಾಳೆಹೊನ್ನೂರಿಗೆ ರಾತ್ರಿ ಸುಮಾರು 9.30 ಗಂಟೆಗೆ ಬಂದೆವು. ಚಾಸಾ-1 ರವರು ನಮ್ಮ ಸಂಬಂಧಿಕರಲ್ಲ. ಶೃಂಗೇರಿಯ ನಟರಾಜ್ ಎಂಬುವವರು ನಮ್ಮ ಸಂಬಂಧಿಕರಲ್ಲ. ನನ್ನ ವಿರುದ್ಧ ದೂರನ್ನು ಆರೋಪಿತರು ಕರ್ನಾಟಕ ಲೋಕಾಯುಕ್ತದಲ್ಲಿ ದಾಖಲು ಮಾಡಿರುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನನ್ನ ಮೇಲೆ ವೈಯಕ್ತಿಕವಾಗಿ ದೂರು ದಾಖಲು ಮಾಡಿಲ್ಲ ಅರಣ್ಯ ಭೂಮಿ ಒತ್ತುವರಿ ಮಾಡಿರುವ ವಿಚಾರವಾಗಿ ದೂರು ದಾಖಲು ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಆರೋಪಿತರು ಅರಣ್ಯ ಇಲಾಖೆಯ ಅಧಿಕಾರಿಗಳೊಂದಿಗೆ ಶರಿಕ್ ಆಗಿ ನಾನು ಅರಣ್ಯ ಭೂಮಿಯನ್ನು ಒತ್ತುವರಿ ಮಾಡಿರುತ್ತೇನೆ ಎಂದು ಅರಣ್ಯ ಅಧಿಕಾರಿಗಳ ವಿರುದ್ಧ ಕರ್ನಾಟಕ ಲೋಕಾಯುಕ್ತದಲ್ಲಿ ದೂರನ್ನು ದಾಖಲು ಮಾಡಿರುತ್ತಾರೆಂದರೆ ಸರಿ. ಸದರಿ ಪ್ರಕರಣ ವಿಚಾರಣೆಗೆ ಬಾಕಿ ಇರುವುದಿಲ್ಲ. ಆರೋಪಿತರು

ಶೃಂಗೇರಿಯ ಗ್ರಾಮ ಪಂಚಾಯಿತಿ ಸದಸ್ಯರಾಗಿದ್ದರು ಎಂದರೆ ಸರಿ. ಚಾಸಾ-1 ರವರೂ ಸಹ ಹಾಸನದಲ್ಲಿನ ಸಮಾವೇಶಕ್ಕೆ ಬಂದಿದ್ದರು ಆದರೆ ಅವರು ನಮ್ಮ ಜೊತೆ ಬಂದಿರಲಿಲ್ಲ. ಚಾಸಾ-1 ರವರು ಹಾಸನದ ಸಮಾವೇಶಕ್ಕೆ ಹೇಗೆ ಬಂದಿದ್ದರು ಎಂದು ನಿಖರವಾಗಿ ಗೊತ್ತಿಲ್ಲ. ಚಾಸಾ-1 ರವರು ಹಾಸನದಿಂದ ಬಾಳೆಹೊನ್ನೂರಿಗೆ ವಾಪಸ್ಸು ಟಿ ಟಿ ಯಲ್ಲಿ ಬಂದಿರಬಹುದು. ಸದರಿ ಟಿ ಟಿ ಯಲ್ಲಿ ಯಾರು ಯಾರು ಜೊತೆ ಇದ್ದರು ಎಂದು ನನಗೆ ಗೊತ್ತಿಲ್ಲ. ಆರೋಪಿತರು ಆ ದಿನ ಎಲ್ಲಿಂದ ಎಲ್ಲಿಗೆ ಹೋಗುತ್ತಿದ್ದರು ಎಂದು ನನಗೆ ಗೊತ್ತಿಲ್ಲ. ಆ ದಿನ ಆರೋಪಿತರು ಒಬ್ಬರೇ ಇದ್ದರು ಎಂದರೆ ಸಾಕ್ಷಿಯು ಗಲಾಟೆಯಾಗುವ ಸಂದರ್ಭದಲ್ಲಿ ಒಬ್ಬರೇ ಇದ್ದರು ಎಂದು ನುಡಿಯುತ್ತಾರೆ. ಆ ಸಂದರ್ಭದಲ್ಲಿ ಸೌಂದರ್ಯ ಹೋಟೆಲ್ ಬಳಿ ಸುಮಾರು 5-10 ಜನ ಇದ್ದರು. ಸದರಿ 5-10 ಜನರು ಯಾರು ಎಂದು ನನಗೆ ಗೊತ್ತಿಲ್ಲ. ಸದರಿ ಸೌಂದರ್ಯ ಹೋಟೆಲ್ ನಿಂದ 100 ಮೀ ಅಂತರದಲ್ಲಿ ಬಾಳೆಹೊನ್ನೂರು ಪೊಲೀಸ್ ಠಾಣೆ ಇದೆ ಎಂದರೆ ಸರಿ. ಸದರಿ ಹೋಟೆಲ್ ಬಸ್ ನಿಲ್ದಾಣದಿಂದ ಸ್ವಲ್ಪ ದೂರದಲ್ಲಿದೆ. ನಾನು ಸದರಿ ದಿನ ಸೌಂದರ್ಯ ಹೋಟೆಲ್ ಗೆ ಊಟಕ್ಕೆ ಹೋಗಿರಲಿಲ್ಲ. ನಾನು ಸದರಿ ದಿನದಂದು ಯಾವುದೇ ಗಲಾಟೆ ಮತ್ತು ಹಲ್ಲೆಯನ್ನು ನೋಡಿರುವುದಿಲ್ಲ ಎಂದರೆ ಸರಿಯಲ್ಲ. ಎಂಒ-1 ನ್ನು ನಾನು ನ್ಯಾಯಾಲಯದಲ್ಲಿ ಪ್ರಥಮ ಬಾರಿಗೆ ನೋಡುತ್ತಿದ್ದೇನೆಂದರೆ ಸರಿಯಲ್ಲ. ನಾನು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಆರೋಪಿತರು ನಮ್ಮ ಜಾಗದ ವಿಚಾರವಾಗಿ ಲೋಕಾಯುಕ್ತದಲ್ಲಿ ದೂರು ದಾಖಲು ಮಾಡಿರುವ ಕಾರಣ ನಾನು ಈ ಪ್ರಕರಣದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಾನು ಮತ್ತು ನಟರಾಜ್ ಸಂಬಂಧಿಕರು ಎಂದರೆ ಸರಿಯಲ್ಲ. ಸದರಿ ನಟರಾಜ್ ರವರು ಸಹ ಅಕ್ರಮವಾಗಿ ಭೂಮಿಯನ್ನು ಒತ್ತುವರಿ ಮಾಡಿರುವುದರಿಂದ ಅವರ ವಿರುದ್ಧವೂ ಸಹ ಆರೋಪಿತರು ಕರ್ನಾಟಕ ಲೋಕಾಯುಕ್ತದಲ್ಲಿ ದೂರು ದಾಖಲು ಮಾಡಿರುತ್ತಾರೆಂದರೆ ನನಗೆ ಗೊತ್ತಿಲ್ಲ. ಆ ಕಾರಣದಿಂದ ನಾನು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಸದರಿ ನಟರಾಜ್ ರವರು ಶೃಂಗೇರಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾಗಿದ್ದರು ಎಂದರೆ ಸರಿ. ಆರೋಪಿತರ ಮೇಲೆ ನಾನು, ಚಾಸಾ-7, ಚಾಸಾ-1 ಮತ್ತು 4 ರವರು ಹಲ್ಲೆ ಮಾಡಿರುತ್ತೇವೆ ಮತ್ತು ಇದರಿಂದ ತಪ್ಪಿಸಿಕೊಳ್ಳಲು ಚಾಸಾ-1 ರವರ ಮುಖಾಂತರ ಆರೋಪಿತರ ವಿರುದ್ಧ ಈ ಸುಳ್ಳು ದೂರು ದಾಖಲು ಮಾಡಿರುತ್ತೇವೆಂದರೆ ಸರಿಯಲ್ಲ. ಆರೋಪಿತರೂ ಸಹ ಆ ದಿನ ಹಲ್ಲೆಗೊಳಗಾಗಿ ಚಿಕಿತ್ಸೆಗಾಗಿ ಆಸ್ಪತ್ರೆಯಲ್ಲಿ ದಾಖಲಾಗಿದ್ದರು ಎಂದರೆ ಸರಿಯಲ್ಲ. ಸದರಿ ಆರೋಪಿತರನ್ನು ಪ್ರಕರಣವನ್ನು ರಾಜೀ ಮಾಡಿಕೊಳ್ಳುವ ಎಂದು ಹೇಳಿ ಅವರನ್ನು ಆಸ್ಪತ್ರೆಯಿಂದ

ಶೃಂಗೇರಿಗೆ ಕಳುಹಿಸಿಕೊಟ್ಟೆವು ಮತ್ತು ತದನಂತರ ಆರೋಪಿತರ ವಿರುದ್ಧ ಈ ಸುಳ್ಳು ದೂರು ದಾಖಲಿಸಿರುತ್ತೇವೆಂದರೆ ಸರಿಯಲ್ಲ.

**ಃ ಮರು ವಿಚಾರಣೆ ಇಲ್ಲಃ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇ ಎ ಒ**

**ಪ್ರ.ದ.ನ್ಯಾದಂಃ ನ.ರಾ.ಪುರ.**

**ಸಾಕ್ಷಿ ಸಹಿಃ**